

ಪಿಟ್ ವೈಪರ್ ಉರಗಗಳು ಸಿಕ್ಕವು. ಅದರಲ್ಲೂ ಕಿತ್ತಳೆ ಬಣ್ಣದ ಪಿಟ್ ವೈಪರ್ ಸಿಗುವುದು ಕೊಂಚ ದುರ್ಲಭ. ಕಪ್ಪೆಗಳ ಹೊಡೆದು ತಿನ್ನುವ ಮೂಡಿನಲ್ಲಿದ್ದ ಇದನ್ನು ಗೈಡ್ ಕಾಕಬೀಸೆ ಮೊದಲೇ ಗುರುತಿಸಿ ಇಟ್ಟುಕೊಂಡಿದ್ದನೋ ಏನೋ? ನಮಗೊಂದು ಪವಾಡ ಕಾಣಿಸಿದಂತೆ ಗುಟ್ಟಾಗಿ ಕರಕೊಂಡು ಹೋಗಿ ನಿಮಗೆ ಮಾತ್ರ ಇದು ಸಿಕ್ಕಿದ್ದು ಬೇಗ ಪಟ ತೆಗೆದುಕೊಳ್ಳಿ ಎಂದು ಬಂಗಾರದ ಗಟ್ಟಿಯೇ ಕೊಡಿಸಿದಂತೆ ಪಿಸುಗುಟ್ಟಿದನು.

ಎಲ್ಲೋ ಟೈಗರ್ ಮಾತ್ ಕ್ಯಾಟರ್ ಪಿಲ್ಲರ್ ಎಂಬ ಜೀವಿ ನೋಡಲು ವಿಚಿತ್ರ ಎನಿಸಿದರೂ ಅದರ ಬಣ್ಣ ತುಂಬಾ ಆಕರ್ಷಕ. ಮೈ ಮೇಲಿನ ಚೆಂದದ ಚಿತ್ತಾರಗಳನ್ನು ಯಾವ ಚಿತ್ರಕಾರನ ಕೈಲಿ ಹೇಳಿ ಮಾಡಿಸಿದ್ದರೋ! ಎನ್ನುವಂತೆ ಚಿತ್ತಾರ. ಹಗಲೊತ್ತು ಇದೇನಾದರೂ ಕಂಡರೆ ಪಕ್ಷಿಗಳು ಬಡಿದು ಬಾಯಿಗೆ ಹಾಕಿಕೊಳ್ಳುವುದಂತೂ ಖಚಿತ. ಕೀಟ ತಿನ್ನುವ ಪಕ್ಷಿಗಳಿಗೆ ಇದೊಂದು ಭೂರಿ ಭೋಜನವೇ ಹೌದು. ತನ್ನ ಬಾಯಿ ಕೆಳಗಿನ ಚರ್ಮವನ್ನು ಬಲೂನಿನಂತೆ ಹಿಗ್ಗಿಸಿ ನಾದ ಹೊರಡಿಸುವ ಕಪ್ಪೆಗೆ ಅಂಬೋಲಿ ಕಪ್ಪೆ ಎನ್ನುತ್ತಾರೆ. ಗಾಳಿ ತುಂಬಿಕೊಂಡು ವಿಚಿತ್ರ ಶಬ್ದ ಹೊರಡಿಸುವ ಅಂಬೋಲಿ ಕಪ್ಪೆ ಮಳೆಗಾಲದಲ್ಲಿ ಸಂಗಾತಿಯನ್ನು ಕೂಗಿ ಕರೆಯುತ್ತದೆ. ಇದರ ಚಂದ್ರಮಂಚಕೆ ಚಕೋರಿ ಸಿಗುವ ತನಕ ತನ್ನ ರಾಗಾಲಾಪನೆಯನ್ನು ಇದು ಬಂದ್ ಮಾಡುವ ಪ್ರಶ್ನೆಯೇ ಇಲ್ಲ. ಕಪ್ಪೆಗಳ ಮಳೆಗಾನದ ವಟವಟ ಆರ್ಕೆಸ್ಟ್ರಾ ನಮಗೆ ಪಿರಿಪಿರಿ ಎನಿಸಬಹುದು. ಆದರದು ಅವುಗಳ ಮದುವೆಯ ಸೀಝುನ್. ಕೂಡಾವಳಿಯ ಸಂಭ್ರಮ ಜಾತ್ರೆ. ಹೆಣ್ಣಿನ ಸಂಗಕ್ಕೆ ಹಾತೊರೆಯುವ ಗಂಡುಗಳು ತಮ್ಮ ಕೂಗುವಿಕೆಯ ಕಾರಣದಿಂದಲೇ ಹಾವಿಗೆ ಆಹಾರವಾಗುತ್ತವೆ.

ಊಹೆಗೂ ನಿಲುಕದ ಬಣ್ಣದ, ವೈಯ್ಯಾರದ ಈ ಜೀವಚರಗಳು ಹಗಲೊತ್ತಿನಲ್ಲಿ ದುರ್ಬೀನು ಹಾಕಿ ಹುಡುಕಿದರೂ ಸಿಗುವುದಿಲ್ಲ. ನಿಶಾಚರಿಗಳಾಗಿ ಹೀಗೆ ಅಂಡಲೆಯುತ್ತಾ ಹೋದರಷ್ಟೇ ದಕ್ಕುವುದು. ಅಂಬೋಲಿಗೆ ಭೇಟಿ ನೀಡುವ ತಿರುಗಾಟ ಪ್ರಿಯರು ಅಕ್ಟೋಬರ್ ಮತ್ತು ಫೆಬ್ರುವರಿ ನಡುವೆ ಚಳಿ ಅನುಭವಿಸಲು ಹೋಗುತ್ತಾರೆ. ಆದರೆ ನಾವು ಹೋಗಿದ್ದು ಪಕ್ಕಾ ಮಳೆ ಸುರಿಯುವ ಸಮಯದಲ್ಲಿ. ಆಗ ಜಲಪಾತಗಳ ಜೊತೆಗೆ ರಾತ್ರಿಯ ಕಾಡಿನ ಜಗತ್ತನ್ನೂ ನೋಡಬಹುದು. ಒಂದೊಂದು ಋತುವಿನಲ್ಲೂ ಈ ಜಾಗ ಕಾಣುವ ರೀತಿ ವಿಭಿನ್ನ. ಹೆಪ್ಪುಗಟ್ಟಿದ ಹಸಿರು ಕಾಡು, ಶ್ವೇತಮಯ ಮೋಡ, ಜಿಟಿಜಿಟಿ ತುಂತುರು ಮಳೆಯಲ್ಲಿ ಕ್ಷಣಕ್ಷಣಕ್ಕೂ ಬದಲಾಗುವ ನಿಸರ್ಗದ ನಾಟಕೀಯ ದೃಶ್ಯಗಳು ಅಬ್ಬಾ! ಮರೆಯಲಾಗದ್ದು. ಧರೆಯ ಮೇಲೊಂದು ಸ್ವರ್ಗವನ್ನು ಹುಡುಕುತ್ತಿದ್ದರೆ 'ಮಹಾರಾಷ್ಟ್ರದ ರಾಣಿ' ಅಂಬೋಲಿಗೆ ಹೋಗಿಬಿಡಿ. ●